ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿಆರ್-02/2025 ದಿನಾಂಕ: 20-08-2025

**ಯುಜಿಸಿಇಟಿ – ಯುಜಿನೀಟ್ 2025 ರ ಎರಡನೇ ಸೀಟು ಹಂಚಿಕೆ ಕುರಿತ ಮಾಹಿತಿ**

ವೈದ್ಯಕೀಯ, ದಂತ ವೈದ್ಯಕೀಯ, ಹೋಮಿಯೋಪತಿ, ಆಯುರ್ವೇದ, ನ್ಯಾಚುರೋಪತಿ ಮತ್ತು ಯೋಗ, ಇಂಜಿನಿಯರಿಂಗ್, ಆರ್ಕಿಟೆಕ್ಚರ್, ಕೃಷಿ ವಿಜ್ಞಾನ, ವೆಟರಿನರಿ, ಬಿ-ಫಾರ್ಮ್, ಫಾರ್ಮ-ಡಿ, ಬಿ.ಎಸ್.ಸಿ (ನರ್ಸಿಂಗ್), ಬಿಪಿಟಿ, ಬಿಪಿಒ, ಅಲೈಡ್ ಹೆಲ್ತ್ ಸೈನ್ಸ್ ಮುಂತಾದ ಕೋರ್ಸುಗಳಿಗೆ ಎರಡನೇ ಸುತ್ತಿನ ಸೀಟು ಹಂಚಿಕೆಯನ್ನು ಆನ್‌ಲೈನ್ ಮೂಲಕ ನಡೆಸಲಾಗುವುದು. ವೇಳಾಪಟ್ಟಿಯನ್ನು ಪ್ರತ್ಯೇಕವಾಗಿ ನೀಡಲಾಗಿದೆ.

**ಆಯುಷ್ ಕೋರ್ಸುಗಳು**

ಆಯುಷ್ ಕೋರ್ಸುಗಳಿಗೆ ಸರ್ಕಾರವು ನೀಡಿರುವ ಸೀಟ್ ಮ್ಯಾಟ್ರಿಕ್ಸ್ ಅನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ. ಇದೇ ಎರಡನೇ ಸುತ್ತಿನಲ್ಲಿ ಸೀಟು ಹಂಚಿಕೆಗೆ ಪರಿಗಣಿಸಲಾಗುವುದು. ಯುಜಿನೀಟ್ 2025 ರಲ್ಲಿ ಅರ್ಹತೆ ಪಡೆದಿರುವ ಮತ್ತು ಈಗಾಗಲೇ ಮೊದಲನೇ ಸುತ್ತಿನಲ್ಲಿ ಭಾಗವಹಿಸಿರುವ ಅಭ್ಯರ್ಥಿಗಳು (ಛಾಯ್ಸ್-1 ಆಯ್ಕೆ ಮಾಡಿ, ಶುಲ್ಕ ಪಾವತಿಸಿ ಕಾಲೇಜಿನಲ್ಲಿ ಪ್ರವೇಶ ಪಡೆದಿರುವವರನ್ನು ಬಿಟ್ಟು) ಆಸಕ್ತಿ ಇದ್ದಲ್ಲಿ ಆಯುಷ್ ಕೋರ್ಸುಗಳಿಗೆ Options ಗಳನ್ನು ಆದ್ಯತಾ ಕ್ರಮದಲ್ಲಿ ದಾಖಲಿಸಬಹುದು.

**ಎರಡನೇ ಸುತ್ತಿನಲ್ಲಿ ಸೀಟು ಹಂಚಿಕೆ ಕ್ರಮ**

ಎರಡನೇ ಸುತ್ತಿನ ಸೀಟು ಹಂಚಿಕೆ ಪ್ರಾರಂಭವಾಗುವ ಮೊದಲು ಈ ಕೆಳಗೆ ವಿವರಿಸಿರುವ ಎಲ್ಲಾ ಸೀಟುಗಳನ್ನು ಸೇರಿಸುವ ಮೂಲಕ ಸೀಟ್ ಮ್ಯಾಟ್ರಿಕ್ಸ್ ಅನ್ನು ಪ್ರಕಟಿಸಲಾಗುವುದು ಮತ್ತು ಎರಡನೇ ಸುತ್ತಿನ ಸೀಟು ಹಂಚಿಕೆಯನ್ನು ಮೊದಲ ಸುತ್ತಿನ ಸೀಟು ಹಂಚಿಕೆಯ ಕ್ರಮದಲ್ಲಿಯೇ ರೋಸ್ಟರ್ ಪದ್ಧತಿಯಂತೆ ನಡೆಸಲಾಗುವುದು.

ನಂತರ ಭರ್ತಿಯಾಗದೆ ಉಳಿಯಬಹುದಾದ ಗ್ರಾಮೀಣ, ಕನ್ನಡ ಮಾಧ್ಯಮ, ಕಲ್ಯಾಣ ಕರ್ನಾಟಕ, ಮತ್ತು ವಿವಿಧ ಮೀಸಲು ವರ್ಗದ ಮೀಸಲಾತಿ ಸೀಟುಗಳನ್ನು ನಿಯಮಾನುಸಾರ ಆಯಾ ಮೀಸಲು ಪ್ರವರ್ಗದ ಅಭ್ಯರ್ಥಿಗಳಿಗೆ ಎರಡನೇ ಸುತ್ತಿನಲ್ಲಿ ಹಂಚಿಕೆ ಮಾಡಲು ಕ್ರಮವಹಿಸಲಾಗುವುದು. ಆ ನಂತರವೂ ಉಳಿಯಬಹುದಾದ ಸೀಟುಗಳನ್ನು ನಿಯಮಾನುಸಾರ ಸಾಮಾನ್ಯ ಅರ್ಹತೆಗೆ ಪರಿಗಣಿಸಲಾಗುತ್ತದೆ ಮತ್ತು ಮೀಸಲು ವರ್ಗದ ಅಭ್ಯರ್ಥಿಗಳು ಸೇರಿದಂತೆ ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ ಇದೇ ಎರಡನೇ ಸುತ್ತಿನ ಸೀಟು ಹಂಚಿಕೆಯಲ್ಲಿ ಪರಿಗಣಿಸಲಾಗುತ್ತದೆ. ಈ ಕುರಿತು ಈಗಾಗಲೇ ಮಾಹಿತಿಯನ್ನು ಪ್ರಕಟಿಸಲಾಗಿದೆ. ಆಯುಷ್ ಕೋರ್ಸುಗಳು ಸೇರಿದಂತೆ ಎರಡನೇ ಸುತ್ತಿಗೆ ಹೊಸದಾಗಿ ಸೇರ್ಪಡೆಯಾಗಬಹುದಾದ ಎಲ್ಲಾ ಸೀಟುಗಳಿಗೂ ಸಹ ಈ ಮೇಲಿನ ಕ್ರಮದಲ್ಲಿಯೇ ನಿಯಮಾನುಸಾರ ಸೀಟು ಹಂಚಿಕೆಯನ್ನು ನಡೆಸಲಾಗುವುದು.

**ಎರಡನೇ ಸುತ್ತಿನಲ್ಲಿ ಆಯ್ಕೆ / ಇಚ್ಛೆಗಳನ್ನು ನಮೂದಿಸುವ ಕುರಿತು ಸೂಚನೆಗಳು**

1. ಎರಡನೇ ಸುತ್ತಿನ ಸೀಟು ಹಂಚಿಕೆಗೆ ಲಭ್ಯವಿರುವ ಸೀಟುಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು.
2. ಸೀಟುಗಳ ಲಭ್ಯತೆಯ ಕುರಿತು ಆಗಿಂದಾಗ್ಗೆ ಪ್ರಾಧಿಕಾರದ ವೆಬ್‌ಸೈಟ್ ಅನ್ನು ಪರಿಶೀಲಿಸುತ್ತಿರಲು ಸೂಚಿಸಲಾಗಿದೆ, ಏಕೆಂದರೆ ರದ್ದುಗೊಳ್ಳುವ / ಮುಟ್ಟುಗೋಲು ಹಾಕಿಕೊಳ್ಳುವ / ಹೊಸದಾಗಿ ಸೇರಿಸಬಹುದಾದ ಸೀಟುಗಳನ್ನು ಆಗಿಂದಾಗ್ಗೆ ಪ್ರಕಟಿಸಲಾಗುತ್ತದೆ.



18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583 Helpline : 080 - 23 460 460.
e-mail : keauthority-ka@nic.in Website : http://kea.kar.nic.in

3. Option Entry ಪೋರ್ಟಲ್ ಸಕ್ರಿಯಗೊಂಡ ನಂತರ ಅರ್ಹ ಅಭ್ಯರ್ಥಿಗಳು ಪೋರ್ಟ್‌ಲ್‌ನಲ್ಲಿ ಲಾಗಿನ್ ಮಾಡಿ ಒಪ್ಪಿಗೆ ನೀಡುವ ಮೂಲಕ ಮತ್ತು ಶುಲ್ಕದ ವಿವರಗಳನ್ನು ದೃಢೀಕರಿಸಿಕೊಂಡು ಆದ್ಯತೆಯ ಕ್ರಮದಲ್ಲಿ ಆಯ್ಕೆಗಳನ್ನು ಎಚ್ಚರಿಕೆಯಿಂದ ಮರುಕ್ರಮಗೊಳಿಸಬಹುದು.
4. ಸೀಟು ಹಂಚಿಕೆಯ ಸಮಯದಲ್ಲಿ ಉದ್ಭವಿಸಬಹುದಾದ. ಕಾರಣದಿಂದ ಲಭ್ಯವಾಗುವ ಸೀಟುಗಳು ಅಥವಾ ಸೀಟ್ ಮ್ಯಾಟ್ರಿಕ್ಸ್ ಪ್ರಕಟಣೆಯ ನಂತರ ರದ್ದಾಗಬಹುದಾದ ಸೀಟುಗಳು ಅಥವಾ ಸೀಟ್ ಮ್ಯಾಟ್ರಿಕ್ಸ್ ಗೆ ಹೊಸದಾಗಿ ಸೇರಿಸಬಹುದಾದ ಸೀಟುಗಳನ್ನೂ ಸಹ ಹಂಚಿಕೆಗೆ ಪರಿಗಣಿಸಲಾಗುತ್ತದೆ. ಆದ್ದರಿಂದ ಸೀಟ್ ಮ್ಯಾಟ್ರಿಕ್ಸ್ ನಲ್ಲಿ ತೋರಿಸಿರುವ ಸೀಟುಗಳನ್ನು ಲೆಕ್ಕಿಸದೇ ಅಭ್ಯರ್ಥಿಗಳು ಆಯ್ಕೆ ಮಾಡಲು ಆಸಕ್ತಿ ಇರುವ ಎಲ್ಲಾ Options ಗಳನ್ನು ಉಳಿಸಿಕೊಳ್ಳಲು ಸೂಚಿಸಲಾಗಿದೆ. (Options ಗಳ ಪಟ್ಟಿಯಲ್ಲಿ Options ಇದ್ದಲ್ಲಿ ಮಾತ್ರ ತಮಗೆ ಆಸಕ್ತಿ ಇರುವ ಸೀಟುಗಳನ್ನು ಪಡೆಯಲು ಸಾಧ್ಯವಾಗುತ್ತದೆ.)
5. ಒಂದು ವೇಳೆ Options ಗಳ ಪಟ್ಟಿಯಲ್ಲಿ ಅನಗತ್ಯ Options ಗಳು ಇವೆ ಎಂದು ನಿರ್ಧರಿಸಿದರೆ, ಅವುಗಳನ್ನು ಅವರ ಪೋಷಕರೊಂದಿಗೆ ಸಮಾಲೋಚಿಸಿ ತೆಗೆದುಹಾಕಬಹುದು.
6. ಅಭ್ಯರ್ಥಿಗಳು ಮೇಲ್ಪಟ್ಟ ಆದ್ಯತೆಗಳನ್ನು ಬದಲಾಯಿಸಬಹುದು ಅಥವಾ ತೆಗೆದುಹಾಕಬಹುದು. ಎರಡನೇ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಅಭ್ಯರ್ಥಿಗಳು ಬೇರೆ ಸೀಟು ತೆಗೆದುಕೊಳ್ಳುವ ಕಾರಣದಿಂದ ಉದ್ಭವಿಸುವ ಸೀಟುಗಳನ್ನೂ ಸಹ ಮೆರಿಟ್ ಆಧಾರದ ಮೇಲೆ ಹಂಚಿಕೆ ಮಾಡುವುದರಿಂದ ಸೀಟ್ ಮ್ಯಾಟ್ರಿಕ್ಸ್ ನಲ್ಲಿ ಸೀಟುಗಳ ಲಭ್ಯತೆ ಇಲ್ಲದಿದ್ದರೂ ಸಹ OPTIONS ಗಳನ್ನು ಉಳಿಸಿಕೊಳ್ಳಬಹುದು. ಅಭ್ಯರ್ಥಿಗಳು ತಮಗೆ ಆಸಕ್ತಿ ಇರುವ ಎಲ್ಲಾ OPTIONS ಗಳನ್ನು ಆದ್ಯತಾ ಕ್ರಮದಲ್ಲಿ ನಮೂದಿಸಲು ಸಲಹೆ ನೀಡಲಾಗಿದೆ.
7. ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಭಾಗವಹಿಸಲು ಇಚ್ಚಿಸಿರುತ್ತಾರೆ ಎಂದರೆ, ಮೊದಲ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗಿಂತ ಉತ್ತಮವಾದ ಸೀಟನ್ನು ಆಯ್ಕೆ ಮಾಡಿಕೊಳ್ಳಲು ಭಾಗವಹಿಸುತ್ತಾರೆ. ಈ ಸುತ್ತಿನಲ್ಲಿ ಅಭ್ಯರ್ಥಿಗಳಿಗೆ ಯಾವುದೇ ಮೇಲ್ಪಟ್ಟ ಆದ್ಯತೆಗಳ ಸೀಟು ದೊರಕದಿದ್ದಲ್ಲಿ, ಮೊದಲ ಸುತ್ತಿನಲ್ಲಿ ಯಾವುದಾದರೂ ಸೀಟು ಹಂಚಿಕೆಯಾಗಿದ್ದಲ್ಲಿ ಅದೇ ಸೀಟು ಉಳಿಯುತ್ತದೆ.

**ಗಮನಿಸಿ:** ಅಭ್ಯರ್ಥಿ ತಮ್ಮ ರ್‍ಯಾಂಕ್ ಸರದಿಯ ನಂತರ ನಮೂದಿಸುವ ಸೀಟುಗಳನ್ನು ಪಡೆಯಲು ಹಕ್ಕನ್ನು ಚಲಾಯಿಸುವಂತಿಲ್ಲ.

**CHOICE-2 ಅನ್ನು ಆಯ್ಕೆ ಮಾಡಿರುವ ಅಭ್ಯರ್ಥಿಗಳು ಈ ಕೆಳಗಿನ ನಿರ್ದೇಶನಗಳನ್ನು ಪಾಲಿಸಬೇಕು.**

- CHOICE-2 ಅಭ್ಯರ್ಥಿಗಳು ಮೊದಲನೇ ಸುತ್ತಿನಲ್ಲಿ ಆಯ್ಕೆಯಾದ ಸೀಟನ್ನು ತಮ್ಮೊಡನೆ ಉಳಿಸಿಕೊಂಡು ಎರಡನೇ ಸುತ್ತಿನಲ್ಲಿ ಭಾಗವಹಿಸುತ್ತಾರೆ. ಅಂತಹ ಅಭ್ಯರ್ಥಿಗಳಿಗೆ ಯಾವುದೇ ಸೀಟು ಅಂದರೆ Higher Order Options ಹಂಚಿಕೆಯಾದಲ್ಲಿ ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟು ರದ್ದುಗೊಳ್ಳುತ್ತದೆ. ಎರಡನೇ ಸುತ್ತಿನಲ್ಲಿ ಯಾವುದೇ ಸೀಟು ಹಂಚಿಕೆಯಾಗದಿದ್ದಲ್ಲಿ ಮೊದಲ ಸುತ್ತಿನಲ್ಲಿ ಪಡೆದ ಸೀಟು ಅವರ ಬಳಿಯೇ ಇರುತ್ತದೆ.

.....3

- Higher Order Options ಅಂದರೆ, ಒಬ್ಬ ಅಭ್ಯರ್ಥಿಯು 180 ಆಪ್ಷನ್‌ಗಳನ್ನು ದಾಖಲಿಸಿದ್ದಲ್ಲಿ, ಇವುಗಳ ಪೈಕಿ ಮೊದಲನೇ ಸುತ್ತಿನಲ್ಲಿ ಅಭ್ಯರ್ಥಿಗೆ 123 ನೇ ಕ್ರಮಾಂಕದ ಆಪ್ಷನ್‌ನ ಸೀಟು ದೊರಕಿದೆ ಎಂದು ಭಾವಿಸಿದಲ್ಲಿ, 1 ರಿಂದ 122 ನೇ ಆಪ್ಷನ್‌ಗಳ ಸೀಟುಗಳು Higher Order Options ಆಗುತ್ತವೆ. ಎರಡನೇ ಸುತ್ತಿನಲ್ಲಿ ಈ ಮೇಲಿನ ಯಾವುದೇ ಆಪ್ಷನ್‌ಗಳಿಗೆ ಮೆರಿಟ್ ಆಧಾರದ ಮೇಲೆ ಸೀಟು ಹಂಚಿಕೆಯಾದಲ್ಲಿ ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟು ರದ್ದುಗೊಳ್ಳುತ್ತದೆ.
- Higher Order Options ಗಳಲ್ಲಿ ಯಾವುದೇ ಸೀಟು ಹಂಚಿಕೆಯಾಗದಿದ್ದಲ್ಲಿ ಮೊದಲನೇ ಸುತ್ತಿನಲ್ಲಿ ಆಯ್ಕೆಯಾದ ಸೀಟು ಅಭ್ಯರ್ಥಿಯ ಹೆಸರಿನಲ್ಲಿರುತ್ತದೆ.
- ಅಭ್ಯರ್ಥಿಗಳು **higher order options** ಗಳನ್ನು ಬದಲಾಯಿಸಿಕೊಳ್ಳಬಹುದು ಅಥವಾ ಆದ್ಯತಾ ಕ್ರಮಗಳನ್ನು ಮಾರ್ಪಡಿಸಿಕೊಳ್ಳಬಹುದು ಅಥವಾ ಯಾವುದಾದರೂ **options** ಬೇಡವಾದಲ್ಲಿ ತೆಗೆದುಹಾಕಬಹುದು.
- ಛಾಯ್ಸ್-2 ಅಭ್ಯರ್ಥಿಗಳಿಗೆ ಮೊದಲ ಸುತ್ತಿನಲ್ಲಿ ಹಂಚಿಕೆಯಾದ **option** ಅನ್ನು ಕೊನೆಯ **option** ಆಗಿ ಪರಿಗಣಿಸಲಾಗುತ್ತದೆ. ಅಭ್ಯರ್ಥಿಗಳು **option** ಗಳನ್ನು ಸಲ್ಲಿಸುವಾಗ ಬಹಳ ಜಾಗರೂಕತೆಯಿಂದ ಸಲ್ಲಿಸಬೇಕು, ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟು ಕೊನೆಯ **option** ಆಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಅಂದರೆ ಅಭ್ಯರ್ಥಿಗಳು ಉಳಿಸುವ ಎಲ್ಲಾ **option** ಗಳನ್ನು ಉನ್ನತ **option** ಗಳು ಎಂದು ಪರಿಗಣಿಸಿ ಸೀಟು ಹಂಚಿಕೆ ಆಗುತ್ತದೆ.
- ಯಾವುದೇ ಅಭ್ಯರ್ಥಿಯು ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟನ್ನು ಉಳಿಸಿಕೊಳ್ಳಲು ಬಯಸಿದರೆ, ಎಲ್ಲಾ higher order **option** ಗಳನ್ನು ಪೋಷಕರೊಡನೆ ಸಮಾಲೋಚಿಸಿ ಅಳಿಸಿ ಹಾಕಬಹುದು.
- ಆಯುರ್ವೇದ, ಯುನಾನಿ ಸೀಟುಗಳಲ್ಲಿ ಆಸಕ್ತಿ ಇದ್ದಲ್ಲಿ ಅರ್ಹ ಅಭ್ಯರ್ಥಿಗಳು ಇಚ್ಛೆ / ಆಯ್ಕೆಗಳನ್ನು ದಾಖಲಿಸಬಹುದು.

**CHOICE-3 ಅನ್ನು ಆಯ್ಕೆ ಮಾಡಿರುವ ಅಭ್ಯರ್ಥಿಗಳು ಈ ಕೆಳಗಿನ ನಿರ್ದೇಶನಗಳನ್ನು ಪಾಲಿಸಬೇಕು.**

- CHOICE-3 ಅಭ್ಯರ್ಥಿಗಳಿಗೆ ಎರಡನೇ ಸುತ್ತಿನಲ್ಲಿ ಇಚ್ಛೆ / ಆಯ್ಕೆಗಳನ್ನು ದಾಖಲಿಸುವ ಪ್ರಕ್ರಿಯೆ ಪ್ರಾರಂಭಿಸಿದ ನಂತರ ಅಭ್ಯರ್ಥಿಗಳು ಲಾಗಿನ್ ಮಾಡಿ, ಒಪ್ಪಿಗೆ ನೀಡಿದ ನಂತರ ಮೊದಲನೇ ಸುತ್ತಿನಲ್ಲಿ ಅಭ್ಯರ್ಥಿಗಳು ದಾಖಲಿಸಿದ ಎಲ್ಲಾ **options** ಗಳನ್ನು ತೋರಿಸಲಾಗುವುದು (ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟು ಹೊರತುಪಡಿಸಿ), ಅಭ್ಯರ್ಥಿಗಳು **options** ಗಳನ್ನು ಬದಲಾಯಿಸಿಕೊಳ್ಳಬಹುದು ಅಥವಾ ಆದ್ಯತಾ ಕ್ರಮಗಳನ್ನು ಮಾರ್ಪಡಿಸಿಕೊಳ್ಳಬಹುದು ಅಥವಾ ಯಾವುದಾದರೂ **options** ಬೇಡವಾದಲ್ಲಿ ತೆಗೆದು ಹಾಕಬಹುದು.
- ಆಯುರ್ವೇದ, ಯುನಾನಿ ಸೀಟುಗಳಲ್ಲಿ ಆಸಕ್ತಿ ಇದ್ದಲ್ಲಿ ಅರ್ಹ ಅಭ್ಯರ್ಥಿಗಳು ಇಚ್ಛೆ / ಆಯ್ಕೆಗಳನ್ನು ದಾಖಲಿಸಬಹುದು.

4

**ಎರಡನೇ ಸುತ್ತಿನಲ್ಲಿ ಪರಿಗಣಿಸುವ ಸೀಟುಗಳ ವರ್ಗ**

| |
|---|
| 1. **ಮೊದಲನೇ ಸುತ್ತಿನಲ್ಲಿ ಹಂಚಿಕೆಯಾಗದ ಸೀಟುಗಳು** |
| 2. **ಮೊದಲನೇ ಸುತ್ತಿನ ನಂತರ ಹೊಸದಾಗಿ ಸೇರ್ಪಡೆಯಾಗಿದ್ದಲ್ಲಿ, ಅಂತಹ ಸೀಟುಗಳು** |
| 3. ಮೊದಲನೇ ಸುತ್ತಿನಲ್ಲಿ ಹಂಚಿಕೆಯಾಗಿ ಅಭ್ಯರ್ಥಿಗಳು **CHOICE** –3 ಮತ್ತು **CHOICE** –4 ಹಾಕುವದರಿಂದ ದೊರೆಯುವ ಸೀಟುಗಳು |
| 4. **ಮೊದಲನೇ ಸುತ್ತಿನ ನಂತರ ರದ್ದುಪಡಿಸಿಕೊಂಡ ಅಭ್ಯರ್ಥಿಗಳ ಸೀಟುಗಳು** |
| 5. ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಯಾವುದೇ **CHOICE** ನೀಡದಿರುವ ಅಭ್ಯರ್ಥಿಗಳ ಸೀಟುಗಳು |
| 6. ಮೊದಲನೇ ಸುತ್ತಿನಲ್ಲಿ **CHOICE** –1 ನೀಡಿ ಶುಲ್ಕ ಪಾವತಿ ಮಾಡದಿರುವ ಸೀಟುಗಳು |
| 7. ಮೊದಲನೇ ಸುತ್ತಿನಲ್ಲಿ **CHOICE** –2 ನೀಡಿ ಶುಲ್ಕ ಪಾವತಿ ಮಾಡದಿರುವ ಸೀಟುಗಳು (ವೈದ್ಯಕೀಯ / ದಂತವೈದ್ಯಕೀಯ / ಹೋಮಿಯೋಪತಿ) |

**ಎರಡನೇ ಸುತ್ತಿನ ಸೀಟು ಹಂಚಿಕೆಯ ಪ್ರಕ್ರಿಯೆಯಲ್ಲಿ ಲಭ್ಯವಾಗುವ ಸೀಟುಗಳು**

| |
|---|
| 1. **ಹಂಚಿಕೆಯ ಸಂದರ್ಭದಲ್ಲಿ ಉದ್ಭವಿಸುವ ಸೀಟುಗಳು.** |
| 2. **ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ CHOICE–2 ಅನ್ನು ಆಯ್ಕೆ ಮಾಡಿರುವ ಅಭ್ಯರ್ಥಿಗಳಿಗೆ ಎರಡನೇ ಸುತ್ತಿನಲ್ಲಿ ಮೇಲ್ಪಟ್ಟ ಆದ್ಯತೆಗಳ ಸೀಟು ಹಂಚಿಕೆಯಾದಲ್ಲಿ ಮೊದಲನೆ ಸುತ್ತಿನ ಸೀಟುಗಳನ್ನು ಹಂಚಿಕೆಗೆ ಪರಿಗಣಿಸಲಾಗುವುದು.** |

***ಎರಡನೇ ಸುತ್ತಿನಲ್ಲಿ ಈ ಕೆಳಕಂಡ ವರ್ಗದ ಅಭ್ಯರ್ಥಿಗಳು ಭಾಗವಹಿಸಬಹುದು***

| **ಭಾಗವಹಿಸಲು ಅರ್ಹತೆ ಇರುವ ಅಭ್ಯರ್ಥಿಗಳ ವಿವರ** | **ಪಾಲಿಸಬೇಕಾದ ಕ್ರಮ** |
|---|---|
| ಮೊದಲನೇ ಸುತ್ತಿನಲ್ಲಿ ಯಾವುದೇ ಸೀಟು ಹಂಚಿಕೆಯಾಗದವರು | ಎರಡನೇ ಸುತ್ತಿನಲ್ಲಿ ಇಚ್ಛೆ / ಆಯ್ಕೆಗಳನ್ನು ದಾಖಲಿಸುವ ಪ್ರಕ್ರಿಯೆ ಪ್ರಾರಂಭಿಸಿದ ನಂತರ option entry portal ನಲ್ಲಿ ಕಡ್ಡಾಯವಾಗಿ ಲಾಗಿನ್ ಮಾಡಿ ಒಪ್ಪಿಗೆ (Agree) ನೀಡಿದ ನಂತರ ಮೊದಲನೇ ಸುತ್ತಿನಲ್ಲಿ ಅಭ್ಯರ್ಥಿಗಳು ದಾಖಲಿಸಿದ ಎಲ್ಲಾ options ಗಳನ್ನು ತೋರಿಸಲಾಗುವುದು. |
| ಮೊದಲನೇ ಸುತ್ತಿನಲ್ಲಿ **CHOICE** – 2 ಆಯ್ಕೆ ಮಾಡಿರುವವರು | Higher Order Options ಗಳನ್ನು ಮಾತ್ರ ತೋರಿಸಲಾಗುವುದು. ಅಭ್ಯರ್ಥಿಗಳು options ಗಳನ್ನು ಬದಲಾಯಿಸಿ ಕೊಳ್ಳಬಹುದು ಅಥವಾ ಆದ್ಯತಾ ಕ್ರಮಗಳನ್ನು ಮಾರ್ಪಡಿಸಿ ಕೊಳ್ಳಬಹುದು ಅಥವಾ options ಬೇಡವಾದಲ್ಲಿ ತೆಗೆದು ಹಾಕಬಹುದು. |
| ಮೊದಲನೇ ಸುತ್ತಿನಲ್ಲಿ **CHOICE** – 3 ಆಯ್ಕೆ ಮಾಡಿರುವವರು | ಎರಡನೇ ಸುತ್ತಿನಲ್ಲಿ ಇಚ್ಛೆ/ ಆಯ್ಕೆಗಳನ್ನು ದಾಖಲಿಸುವ ಪ್ರಕ್ರಿಯೆ ಪ್ರಾರಂಭಿಸಿದ ನಂತರ option entry portal ನಲ್ಲಿ ಕಡ್ಡಾಯವಾಗಿ ಲಾಗಿನ್ ಮಾಡಿ ಒಪ್ಪಿಗೆ ನೀಡಿದ ನಂತರ CHOICE-3 ಅಭ್ಯರ್ಥಿಗಳಿಗೆ ಮೊದಲನೇ ಸುತ್ತಿನಲ್ಲಿ ಅಭ್ಯರ್ಥಿಗಳು ದಾಖಲಿಸಿದ ಎಲ್ಲಾ options ಗಳನ್ನು ತೋರಿಸಲಾಗುವುದು (ಮೊದಲನೇ ಸುತ್ತಿನಲ್ಲಿ ಹಂಚಿಕೆಯಾಗಿ ಅಭ್ಯರ್ಥಿಯು ರದ್ದುಪಡಿಸಿಕೊಂಡ option ಅನ್ನು ಹೊರತುಪಡಿಸಿ ಉಳಿದ ಎಲ್ಲಾ ಇಚ್ಛೆ / ಆಯ್ಕೆಗಳು). |

*....5*

***ಎರಡನೇ ಸುತ್ತಿನ ಸೀಟು ಹಂಚಿಕೆಯ ಅಣುಕು ಅಥವಾ ತಾತ್ಕಾಲಿಕ ಫಲಿತಾಂಶ ಪ್ರಕಟಣೆ ಮತ್ತು ನಂತರದ ಅಂತಿಮ ಫಲಿತಾಂಶ ಪ್ರಕಟಣೆ ಕುರಿತ ಮಾಹಿತಿ***

ಮೊದಲನೇ ಸುತ್ತಿನ ಸೀಟು ಹಂಚಿಕೆಯ ನಂತರ ಉಳಿದಿರುವ / ರದ್ದು ಪಡಿಸಿಕೊಳ್ಳುವ / ಹೊಸದಾಗಿ ಸೇರ್ಪಡೆಯಾಗುವ ಲಭ್ಯವಾಗುವ ಸೀಟುಗಳನ್ನು ಎರಡನೇ ಸುತ್ತಿನ ಸೀಟು ಹಂಚಿಕೆಗೆ ಪರಿಗಣಿಸಲಾಗುವುದು. ಮೊದಲಿಗೆ ಎರಡನೇ ಸುತ್ತಿನ ಸೀಟು ಹಂಚಿಕೆಯ ಅಣುಕು ಅಥವಾ ತಾತ್ಕಾಲಿಕ ಫಲಿತಾಂಶವನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು. ದಯವಿಟ್ಟು ಈ ಕೆಳಗಿನವುಗಳನ್ನು ಗಮನಿಸಿ:

*1.* ಕರ್ನಾಟಕ ಪರೀಕ್ಷಾ ಪ್ರಾಧಿಕಾರವು 2ನೇ ಸುತ್ತಿನ ಅಣುಕು ಅಥವಾ ತಾತ್ಕಾಲಿಕ ಫಲಿತಾಂಶ ಪ್ರಕಟಿಸಿದ ನಂತರ MCC ರವರ 2ನೇ ಸುತ್ತಿನ ಫಲಿತಾಂಶ ಪ್ರಕಟಣೆಯವರೆಗೆ ಕಾಯಲಾಗುವುದು.

*2.* MCC ರವರ 2ನೇ ಸುತ್ತಿನ ಫಲಿತಾಂಶದ ನಂತರ ಕೆಇಎ ಯಿಂದ ಹಂಚಿಕೆಯಾಗಿರುವ ಸೀಟನ್ನು ಬಿಡಲು ಇಚ್ಛಿಸಿದಲ್ಲಿ ಬಿಟ್ಟುಕೊಡಲು ಅವಕಾಶ ನೀಡಲಾಗುವುದು.

*3.* MCC ಯಿಂದ ಅಥವಾ ಇತರೆ ರಾಜ್ಯಗಳಲ್ಲಿ ಮೆಡಿಕಲ್ / ಡೆಂಟಲ್ ಸೀಟು ದೊರೆತಿದ್ದು, ಕೆಇಎ ಸೀಟು ಬಿಡಲು ಇಚ್ಛಿಸುವ ಅಭ್ಯರ್ಥಿಗಳು ಯಾವುದೇ ದಂಡವಿಲ್ಲದೆ ಬಿಟ್ಟುಕೊಡಬಹುದು.

4. ಇತರೆ ಅಭ್ಯರ್ಥಿಗಳಿಗೆ ದಂಡವಿಲ್ಲದೆ ಯಾವುದೇ ಸೀಟನ್ನು ರದ್ದು ಪಡಿಸುವುದಿಲ್ಲ.(applicable penalty)

**ಎರಡನೇ ಸುತ್ತಿನ ಅಂತಿಮ ಸೀಟು ಹಂಚಿಕೆ ಫಲಿತಾಂಶ**

*5.* ಅಭ್ಯರ್ಥಿಗಳ ಅನುಕೂಲಕ್ಕಾಗಿ, ಕೆಇಎ ನಲ್ಲಿ ರದ್ದಾದ ಎಲ್ಲಾ ಸೀಟುಗಳನ್ನು (ಯಾವುದಾದರು ಇದ್ದಲ್ಲಿ) ಪರಿಗಣಿಸಿ ಮತ್ತು ಅರ್ಹ ಅಭ್ಯರ್ಥಿಗಳು ಎರಡನೇ ಸುತ್ತಿಗೆ ನಮೂದಿಸಿದಂತೆ ಅದೇ ಆದ್ಯತಾ ಕ್ರಮದಲ್ಲಿನ Options ಗಳೊಂದಿಗೆ ಎರಡನೇ ಸುತ್ತಿನ ಸೀಟು ಹಂಚಿಕೆಯನ್ನು ಪುನಃ ರನ್ (Re-run) ಮಾಡಿ, ಎರಡನೇ ಸುತ್ತಿನ ಅಂತಿಮ ಸೀಟು ಹಂಚಿಕೆ ಫಲಿತಾಂಶವನ್ನು ಪ್ರಕಟಿಸಲಾಗುತ್ತದೆ. ***ಉನ್ನತ ಕ್ರಮಾಂಕದ ಸೀಟು ಹಂಚಿಕೆಯು ಆಗುವ ಸಾಧ್ಯತೆ ಇರುತ್ತದೆ. ಮತ್ತೊಮ್ಮೆ Options ಗಳ ಆದ್ಯತೆಗಳನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.***

**ಎರಡನೇ ಸುತ್ತಿನ ಅಂತಿಮ ಸೀಟು ಹಂಚಿಕೆಯ ಫಲಿತಾಂಶದ ನಂತರ CHOICE ಗಳನ್ನ ಆಯ್ಕೆ ಮಾಡುವ ಕುರಿತು ಸೂಚನೆಗಳು**

6. ಇಂಜಿನಿಯರಿಂಗ್, ಆರ್ಕಿಟೆಕ್ಚರ್, ಕೃಷಿ ವಿಜ್ಞಾನ, ವೆಟರಿನರಿ, ಬಿ–ಫಾರ್ಮ್, ಫಾರ್ಮ–ಡಿ, ಬಿ.ಎಸ್.ಸಿ (ನರ್ಸಿಂಗ್), ಬಿಪಿಟಿ, ಬಿಪಿಓ, ಅಲೈಡ್ ಹೆಲ್ತ್ ಸೈನ್ಸ್, ನ್ಯಾಚುರೋಪತಿ ಮತ್ತು ಯೋಗ, ಮುಂತಾದ ಕೋರ್ಸುಗಳಿಗೆ ಎರಡನೇ ಸುತ್ತಿನ ಸೀಟು ಹಂಚಿಕೆಯ ನಂತರ **CHOICE –1 ಅಥವಾ CHOICE –4** ಮಾತ್ರ ಆಯ್ಕೆ ಮಾಡಲು ಅವಕಾಶವಿರುತ್ತದೆ.

......6

**ಎರಡನೇ ಸುತ್ತಿನ ಅಂತಿಮ ಸೀಟು ಹಂಚಿಕೆಯ ಫಲಿತಾಂಶದ ನಂತರ CHOICE ಗಳ ಆಯ್ಕೆ ಮಾಡುವ ಕುರಿತು ಸೂಚನೆಗಳು**

***ವೈದ್ಯಕೀಯ ಮತ್ತು ದಂತ ವೈದ್ಯಕೀಯ ಮತ್ತು ಆಯುಷ್ ಕೋರ್ಸುಗಳು***

1. ಎರಡನೇ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆಯ ನಂತರ ಅಭ್ಯರ್ಥಿಗಳಿಗೆ ಯಾವುದೇ **CHOICE** ಗಳನ್ನು ಆಯ್ಕೆ ಮಾಡಲು ಅವಕಾಶ ಇರುವುದಿಲ್ಲ.
2. ಅಭ್ಯರ್ಥಿಗಳು ಕಡ್ಡಾಯವಾಗಿ ಹಂಚಿಕೆಯಾದ ಸೀಟಿಗೆ ಪ್ರವೇಶವನ್ನು ಪಡೆಯಬೇಕು, ಆದ್ದರಿಂದ ಅಭ್ಯರ್ಥಿಗಳು ಮತ್ತು ಪೋಷಕರು ಕಾಲೇಜಿಗೆ ಸೇರ ಬಯಸುವ ಇಷ್ಟವಿರುವ ಕಾಲೇಜುಗಳನ್ನು ಮಾತ್ರ ದಾಖಲಿಸಬೇಕು, ಏಕೆಂದರೆ ಮೆರಿಟ್ ಆಧಾರದ ಮೇಲೆ ಹಾಗೂ ಅಭ್ಯರ್ಥಿಗಳು ದಾಖಲಿಸುವ options ಗಳನ್ನು ಪರಿಗಣಿಸಿ ಸೀಟು ಹಂಚಿಕೆ ಮಾಡುವುದರಿಂದ ಹಂಚಿಕೆಯಾದ ಸೀಟನ್ನು ನಿರಾಕರಿಸುವಂತಿಲ್ಲ. ಆದ್ದರಿಂದ ಅಭ್ಯರ್ಥಿಗಳು ಎಚ್ಚರದಿಂದ options ಗಳನ್ನು ಆದ್ಯತೆಯ ಕ್ರಮಾಂಕದಲ್ಲಿ ಸಲ್ಲಿಸಬೇಕು.
3. ಎರಡನೇ ಸುತ್ತಿನ ಸೀಟು ಹಂಚಿಕೆಯ ನಂತರ ಶುಲ್ಕ ಪಾವತಿಸಲು ಅಥವಾ ಕಾಲೇಜಿನಲ್ಲಿ ಪ್ರವೇಶ ಪಡೆಯಲು ವಿಫಲನಾ/ಳಾದಲ್ಲಿ ಅಂತಹ ಅಭ್ಯರ್ಥಿಯ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು.
4. ವೈದ್ಯಕೀಯ ಸೀಟು ಹಂಚಿಕೆಯಾಗದ ಅಭ್ಯರ್ಥಿಗಳು ಸೂಚನೆಗಳು / ವೇಳಾಪಟ್ಟಿಯ ಪ್ರಕಾರ ವೈದ್ಯಕೀಯ ಮಾಪ್ ಅಪ್ ಸುತ್ತಿನಲ್ಲಿ ಭಾಗವಹಿಸಬಹುದಾಗಿದೆ.
5. ದಂತವೈದ್ಯಕೀಯ ಸೀಟು ಹಂಚಿಕೆ ಪಡೆದವರು ಸೂಚನೆಗಳು / ವೇಳಾಪಟ್ಟಿಯ ಪ್ರಕಾರ ವೈದ್ಯಕೀಯ ಮಾಪ್ ಅಪ್ ಸುತ್ತಿನಲ್ಲಿ ಭಾಗವಹಿಸಬಹುದಾಗಿದೆ ಆದರೆ ಮತ್ತೊಮ್ಮೆ ದಂತ ವೈದ್ಯಕೀಯ ಸೀಟುಗಳ ಮಾಪ್ ಅಪ್ ಸುತ್ತಿನಲ್ಲಿ ಭಾಗವಹಿಸಲು ಅನುಮತಿಸುವುದಿಲ್ಲ.
6. ಆಯುಷ್ ಸೀಟು ಹಂಚಿಕೆ ಪಡೆದವರು ಸೂಚನೆಗಳು / ವೇಳಾಪಟ್ಟಿಯ ಪ್ರಕಾರ ವೈದ್ಯಕೀಯ ಮಾಪ್ ಅಪ್ ಸುತ್ತಿನಲ್ಲಿ ಭಾಗವಹಿಸಬಹುದಾಗಿದೆ ಆದರೆ ಮತ್ತೊಮ್ಮೆ ಆಯುಷ್ ಸೀಟುಗಳ ಮಾಪ್ ಅಪ್ ಸುತ್ತಿನಲ್ಲಿ ಭಾಗವಹಿಸಲು ಅನುಮತಿಸುವುದಿಲ್ಲ.

ಕಾರ್ಯನಿರ್ವಾಹಕ ನಿರ್ದೇಶಕರು